3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.431/2018**

ಪ್ರಾಸಾ 9

ಚಾಸಾ 11

| | |
|---|---|
| ಹೆಸರು | ಪ್ರದೀಪ |
| ತಂದೆಯ ಹೆಸರು | ಪುಟ್ಟಯ್ಯ |
| ವಯಸ್ಸು | 35 ವರ್ಷ |
| ಉದ್ಯೋಗ | ತಮಟೆ ಹೊಡೆಯುವ ಕೆಲಸ |
| ವಾಸಸ್ಥಳ | ಹಳೇಊರು |

ಸಾಕ್ಷಿಯನ್ನು ದಿನಾಂಕ 12.01.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಈಗ ನನಗೆ ತೋರಿಸಿದ ನಿಪಿ.2 ನನ್ನ ಸಹಿ ಇರುತ್ತದೆ. ಅದನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ17.08.2018 ರಂದು ಮಧ್ಯಾಹ್ನ ರಾಜಾಪುರ ಗೇಟ್ ನಲ್ಲಿ ಮಾಡಿರುತ್ತೇನೆ. ಆಗ ನನ್ನೊಂದಿಗೆ ಭರತ್, ಮಂಜುನಾಥ ಮತ್ತು ವೆಂಕಟೇಶ್ ರವರು ಇದ್ದರು. ಅವರೂ ಸಹ ಸಹಿಗಳನ್ನು ಮಾಡಿರುತ್ತಾರೆ. ಸ್ಥಳಕ್ಕೆ ಡಿವೈಎಸ್‌ಪಿರವರು ಬಂದಿದ್ದರು. ಅವರು ಸ್ಥಳವನ್ನು ಪರಿಶೀಲನೆ ಮಾಡುತ್ತಿದ್ದರು. ಗಲಾಟೆಯಾಗಿರುವ ಬಗ್ಗೆ ಚಾಸಾ.1 ರವರು ಮಾಹಿತಿಯನ್ನು ಕೊಡುತ್ತಿದ್ದರು. ನಿಪಿ.5 ರಲ್ಲಿ ನಾನು ಕಾಣಿಸುವುದಿಲ್ಲ. ನಿಪಿ.5 ರಲ್ಲಿ ಭರತ್ ಮತ್ತು ವೆಂಕಟೇಶ್ ರವರು ಕಾಣುತ್ತಾರೆ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.S.R.R. ವಕೀಲರಿಂದ :**

2) ಪೊಲೀಸರು ನನಗೆ ನೋಟೀಸನ್ನು Whats app ಮೂಲಕ ಕಳುಹಿಸಿದ್ದರಿಂದ ನಾನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುತ್ತೇನೆ. ನಾನು ಮತ್ತು ಚಾಸಾ.1 ರವರು ಅಕ್ಕಪಕ್ಕದ ನಿವಾಸಿಗಳು. ನಾನು ಮತ್ತು ಅವರು ಒಂದೇ ಜನಾಂಗದವರು ಎಂದರೆ ಸರಿ. ನಮ್ಮ ಕಷ್ಟಸುಖಕ್ಕೆ ಅವರು ಸಹಾಯ ಮಾಡುತ್ತಾರೆ ಮತ್ತು ಅವರ ಕಷ್ಟಸುಖಕ್ಕೆ ನಾನು ಸಹಾಯ ಮಾಡುತ್ತೇನೆ ಎಂದರೆ ಸರಿ. ನಿಪಿ.2 ಡಿವೈಎಸ್‌ಪಿರವರ ಕಚೇರಿಯದ್ದು ಎಂದರೆ ಸರಿ. ನಿಪಿ.2 ರಲ್ಲಿ ನಾನು ಸಹಿ ಮಾಡಿದಾಗ ಯಾವುದೇ ಬರವಣಿಗೆ ಇರಲಿಲ್ಲ ಎಂದರೆ ಸರಿ. ಪೊಲೀಸರು ನನಗೆ ಲಿಖಿತವಾಗಿ ಯಾವುದೇ ನೋಟೀಸನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ